# ಸುರಕ್ಷಿತಸ್ಥಳಗಳಾಗಿ ಶಾಲೆಗಳು – ನಮ್ಮ ಇಂದಿನ ಪರಿಸ್ಥಿತಿ ಹೇಗಿದೆ

**ಅರ್ಚನಾ ಮೆಹೆಂದಳೆ ಮತ್ತು ಸ್ವಾಗತಾ ರಾಹಾ**



## ಪೀಠಿಕೆ

ಸಾರ್ವಜನಿಕರ ನಡುವಿನ ಚರ್ಚೆಗಳು, ಶಿಕ್ಷಣದ ಸಾರ್ವತ್ರೀಕರಣದ ಕುರಿತಾದ ನೀತಿಯು, ಮಕ್ಕಳು ಶಾಲೆಗೆ ಪ್ರವೇಶ ಪಡೆದುಕೊಳ್ಳುವುದನ್ನು ಉತ್ತಮಪಡಿಸುವುದರಬಗ್ಗೆ ಹಾಗೂ ಶಾಲೆಗಳಲ್ಲಿ ಮಕ್ಕಳನ್ನು ಉಳಿಸಿಕೊಳ್ಳುವುದು ಮತ್ತು ಭಾಗಿಯಾಗುವುದನ್ನು ಖಚಿತಪಡಿಸಿಕೊಳ್ಳುವುದರ ಕಡೆಗೆ ಮುಖ್ಯವಾಗಿ ತಮ್ಮ ಗಮನವನ್ನು ಹರಿಸಿವೆ. ಮಕ್ಕಳ ಉಚಿತ ಹಾಗೂ ಕಡ್ಡಾಯ ಶಿಕ್ಷಣದ ಹಕ್ಕು ಕಾಯ್ದೆ, 2009 (ಆರ್‌ಟಿಇ ಕಾಯ್ದೆ) ಮತ್ತು ಸರ್ವ ಶಿಕ್ಷಾ ಅಭಿಯಾನದ (ಎಸ್‌ಎಸ್‌ಎ) ಪ್ರಮುಖ ಕಾರ್ಯಕ್ರಮಗಳು ಸರ್ಕಾರಿ/ನೆರೆಹೊರೆಯ ಶಾಲೆಗಳಲ್ಲಿ ಪ್ರವೇಶವನ್ನು ಹಾಗೂ ನಿಗದಿಪಡಿಸಿದ ಮೂಲಸೌಕರ್ಯಗಳು ಮತ್ತು ಶಿಕ್ಷಕರನ್ನು ಹೊಂದಿರುವ ಶಾಲೆಗಳಿಗೆ ಪ್ರವೇಶದ ಹಕ್ಕನ್ನು ಖಚಿತಪಡಿಸುವುದರ ಮೂಲಕ ಶಿಕ್ಷಣದ ಹಕ್ಕನ್ನು ನೀಡುವ ಕಡೆಗೆ ಪ್ರಧಾನವಾಗಿ ಒತ್ತು ನೀಡುತ್ತವೆ. ಆದರೆ, ಆರ್‌ಟಿಇ ಕಾಯ್ದೆ ಹಾಗೂ ಎಸ್‌ಎಸ್‌ಎಗಳು ಶಿಕ್ಷಣದ ವ್ಯಾಪ್ತಿಯೊಳಗೆ ಬರುವಂತಹ ಹಕ್ಕುಗಳ ಬಗ್ಗೆ ಗಮನ ಹರಿಸುವುದಿಲ್ಲ. ಶಾಲೆಗಳ ಆವರಣಗಳೊಳಗೆ ಮಕ್ಕಳ ಹಕ್ಕುಗಳನ್ನು ರಕ್ಷಿಸುವುದಕ್ಕೆ ಹಾಗೂ ಶಾಲೆಗಳನ್ನು ಸುರಕ್ಷಿತ ಸ್ಥಳಗಳಾಗಿ ಖಚಿತಪಡಿಸುವುದಕ್ಕೆ ಸಂಬಂಧಿಸಿದಂತಹ ನಿಬಂಧನೆಗಳು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಹಲವಾರು ಶಾಸನಗಳು, ಸರ್ಕಾರಿ ಅಧಿಸೂಚನೆಗಳು, ಕಾರ್ಯಕ್ರಮಗಳು ಹಾಗೂ ಯೋಜನೆಗಳಲ್ಲಿ ಕಂಡುಬರುತ್ತವೆ. ಈ ಲೇಖನದಲ್ಲಿ ನಾವು ಈ ನಿಬಂಧನೆಗಳನ್ನು ಚರ್ಚಿಸುತ್ತೇವೆ ಹಾಗೂ ವಾಸ್ತವದಲ್ಲಿ ಏನಾಗುತ್ತಿದೆ ಎಂಬುವುದರ ಕುರಿತು ನಮಗೆ ತಿಳಿದಿರುವುದನ್ನು ಮುಂದಿಡುತ್ತೇವೆ.

## ನಿಬಂಧನೆಗಳು ಹಾಗೂ ಅವುಗಳ ಜಾರಿಗೊಳಿಸುವಿಕೆ

ಮಕ್ಕಳಿಗೆ ಸಂಬಂಧಿಸಿದ ಶಾಸನಗಳು ಶಾಲೆಗಳಲ್ಲಿ ನೀಡುವ ದೈಹಿಕ ಶಿಕ್ಷೆ, ಮಕ್ಕಳ ಮೇಲೆ ನಡೆಯುವ ಲೈಂಗಿಕ ಅಪರಾಧಗಳು ಹಾಗೂ ಕ್ರೌರ್ಯಗಳ ಕುರಿತಾಗಿರುವಂಥವಾಗಿವೆ. ಮಾಧ್ಯಮಗಳಲ್ಲಿ ಮಕ್ಕಳ ಮೇಲಿನ ಹಲ್ಲೆಗಳು ಹಾಗೂ ದೌರ್ಜನ್ಯಗಳ ಪ್ರಕರಣಗಳು ವರದಿಯಾದದ್ದು, ನೀತಿನಿರೂಪಣೆಗಳ ಕ್ಷೇತ್ರದಲ್ಲಿ ಸರ್ಕಾರದ ಸುತ್ತೋಲೆಗಳು, ಮಾರ್ಗದರ್ಶಿ ಸೂತ್ರಗಳು ಹಾಗೂ ಸಲಹೆಗಳು ರೂಪುಗೊಳ್ಳುವುದಕ್ಕೆ ಪ್ರೇರಣೆಯಾಯಿತು. ಉದಾಹರಣೆಗೆ, 2010ರಲ್ಲಿ, ಕೊಲ್ಕತಾದ ಒಂದು ಪ್ರಮುಖ ಶಾಲೆಯಲ್ಲಿ ಶಿಕ್ಷಕರುಬೆತ್ತದಲ್ಲಿ ಹೊಡೆದದ್ದಕ್ಕೆ 13 ವರ್ಷದ ಬಾಲಕನೊಬ್ಬನು ಆತ್ಮಹತ್ಯೆ ಮಾಡಿಕೊಂಡನು[1] ಈ ಪ್ರಕರಣವನ್ನುಮಕ್ಕಳ ಹಕ್ಕುಗಳ ರಕ್ಷಣಾ ರಾಷ್ಟ್ರೀಯ ಆಯೋಗವು (ನ್ಯಾಶನಲ್ ಕಮಿಷನ್ ಫಾರ್ ಪ್ರೊಟೆಕ್ಷನ್ ಆಫ್ ಚೈಲ್ಡ್ ರೈಟ್ಸ್) ತನಿಖೆನಡೆಸಿ, ದೈಹಿಕ ಶಿಕ್ಷೆಯ ಕುರಿತಾದ ಮಾರ್ಗದರ್ಶಿ ಸೂತ್ರಗಳು ರೂಪುಗೊಳ್ಳಲು ಎಡೆಮಾಡಿಕೊಟ್ಟಿತು[2]. ಅವುಗಳನ್ನು ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯವು (ಎಮ್.ಎಚ್.ಆರ್.ಡಿ.) ಅಂಗೀಕರಿಸಿತು[3].

## ದೈಹಿಕ ಶಿಕ್ಷೆ

ಉಚಿತ ಹಾಗೂ ಕಡ್ಡಾಯ ಶಿಕ್ಷಣ ಮಕ್ಕಳ ಹಕ್ಕು ಕಾಯ್ದೆ, 2009, ವಿಭಾಗ 17(1) ಮಕ್ಕಳನ್ನು ದೈಹಿಕ ಶಿಕ್ಷೆಗೆ ಅಥವಾ ಕಿರುಕುಳಕ್ಕೆ ಒಳಪಡಿಸುವುದನ್ನು, ಇವುಗಳಲ್ಲಿ ಒಂದನ್ನೂ ಕಾಯ್ದೆಯಲ್ಲಿ ವ್ಯಾಖ್ಯಾನಿಸಿಲ್ಲದಿದ್ದರೂ ನಿಷೇಧಿಸುತ್ತದೆ, ದೈಹಿಕ ಶಿಕ್ಷೆಗೆ ಅನುಮತಿ ನೀಡುವ ದೆಹಲಿ ಶಿಕ್ಷಣ ನಿಯಮಗಳು ಸಂವಿಧಾನದ 14 ಮತ್ತು 21ನೇ ವಿಧಿಗಳನ್ನು ಉಲ್ಲಂಘಿಸುತ್ತಿದ್ದುದರಿಂದ ದೆಹಲಿ ಉಚ್ಚ ನ್ಯಾಯಾಲಯವು ಅವುಗಳನ್ನು ರದ್ದುಪಡಿಸಿತು.[4] ‘ಶಾಲೆಗಳಲ್ಲಿ ಮಕ್ಕಳನ್ನು ದೈಹಿಕ ಶಿಕ್ಷೆಗೆ ಒಳಪಡಿಸಬಾರದು ಹಾಗೂ ಮಕ್ಕಳು ಸ್ವಾತಂತ್ರ್ಯ ಮತ್ತು ಘನತೆಯುಳ್ಳ, ಭಯಮುಕ್ತ ವಾತಾವರಣದಲ್ಲಿ ಶಿಕ್ಷಣವನ್ನು ಪಡೆದುಕೊಳ್ಳುವುದನ್ನು ಸರ್ಕಾರವು ಖಚಿತಪಡಿಸಬೇಕು’ ಎಂದೂ ಸಹ ನಿರ್ದೇಶಿಸಿತು.

ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯದ(ಎಮ್. ಎಚ್.ಆರ್. ಡಿ.) ಸಲಹೆಗಳು ಶಾಲೆಗಳಲ್ಲಿ ದೈಹಿಕ ಶಿಕ್ಷೆಯನ್ನು ಕೊನೆಗಾಣಿಸಲು, ಆರ್.ಟಿ.ಇ. ಕಾಯ್ದೆ, 2009ರ 35(1)ನೇ ವಿಧಿಯು ನೀಡಿರುವ (ಎನ್.ಸಿ.ಪಿ.ಸಿ.ಆರ್. ಮಾರ್ಗದರ್ಶಿ ಸೂತ್ರಗಳನ್ನು ಆಧರಿಸಿದೆ) ದೈಹಿಕ ಶಿಕ್ಷೆಯನ್ನು ತಡೆಗಟ್ಟುವುದು ಹಾಗೂ ಪರಿಹಾರೋಪಾಯ ವಿಧಾನಗಳಿಗೆ ಸಂಬಂಧಿಸಿದಂತೆ ಮಾರ್ಗದರ್ಶಿ ಸೂತ್ರಗಳನ್ನು ಒದಗಿಸುತ್ತದೆ[5]. ಇದುದೈಹಿಕ ದಂಡನೆಯನ್ನು (ಎ) ದೈಹಿಕ ಶಿಕ್ಷೆ, (ಬಿ) ಮಾನಸಿಕ ಕಿರುಕುಳ ಮತ್ತು (ಸಿ) ತಾರತಮ್ಯ ಎಂದು ವಿವರಿಸುತ್ತದೆ ಹಾಗೂ ಇತರರಿಗೆ ತೊಂದರೆ ನೀಡುವಂತಹ ನಡವಳಿಕೆಗಳನ್ನು (ಉದಾ; ಬೆದರಿಸುವಿಕೆ, ಸಹಪಾಠಿಗಳ ಮೇಲೆ ಆಕ್ರಮಣ, ಕಳ್ಳತನ, ಇತರರ ಹಕ್ಕುಗಳ ಉಲ್ಲಂಘನೆ, ವಿಧ್ವಂಸಕ ಕೃತ್ಯಗಳು ಇತ್ಯಾದಿ..) ಹೇಗೆ ನಿಭಾಯಿಸಬೇಕು ಎಂದು ಶಿಕ್ಷಕರಿಗೆ ಮಾರ್ಗದರ್ಶನ ನೀಡಲು ಶಾಲೆಗಳು ಒಂದು ಸ್ಪಷ್ಟವಾದ ಸಂಹಿತೆಯನ್ನು ಹೊಂದಿರಬೇಕೆಂದು

---

[1]‘NCPCR wants states to follow guidelines on corporal punishment’, The Economic Times, 17 July 2010, https://economictimes.indiatimes.com/news/politics-and-nation/ncpcr-wants-states-to-follow-guidelines-on-corporal-punishment/articleshow/6178764.cms

[2]NCPCR, Guidelines for Eliminating Corporal Punishment in Schools, http://www.ncpcr.gov.in/view_file.php?fid=108

[3]MHRD, Advisory for Eliminating Corporal Punishment in Schools under Section 35 (1) of the RTE Act, 2009. available at http://www.education.goa.gov.in/MHRD%20Advisory%20for%20Eliminating%20Corporal%20Punishment%20in%20Schools.pdf

[4]Parents Forum for Meaningful Education v. Union of India, AIR 2001 Delhi 212

[5]Available at http://www.education.goa.gov.in/MHRD%20Advisory%20for%20Eliminating%20Corporal%20Punishment%20in%20Schools.pdf

ಸೂಚಿಸುತ್ತದೆ[6]. ಶಿಕ್ಷಣಕ್ಕೆ ಸಂಬಂಧಿಸಿದಂತೆ ಹಕ್ಕು-ಆಧಾರಿತ ಮನೋಭಾವವನ್ನು ಬೆಳೆಸಿಕೊಳ್ಳಲು, ದೈಹಿಕ ಶಿಕ್ಷೆಯನ್ನು ಕೊನೆಗಾಣಿಸಲು ಹಾಗೂ ಮಕ್ಕಳೊಂದಿಗೆ ಸಕಾರಾತ್ಮಕವಾಗಿ ತೊಡಗಿಕೊಳ್ಳಲು, ಅನುವುಮಾಡಿಕೊಡಲು ಶಾಲಾ ಆಡಳಿತ ಮಂಡಳಿಗಳು ನಿಯತವಾಗಿ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕೆಂದು ಸಲಹಾ ಸಮಿತಿಯು ಸೂಚಿಸುತ್ತದೆ. ಆದರೆ, ಈ ಸಲಹೆಗಳನ್ನು ಜಾರಿಗೊಳಿಸಲಾಗುತ್ತಿದೆಯೇ ಎಂದು ನಿಗಾ ವಹಿಸಲು ಎಮ್.ಎಚ್.ಆರ್.ಡಿ.ಯಾಗಲಿ, ರಾಜ್ಯ ಸರ್ಕಾರಗಳಾಗಲಿ ಯಾವುದೇ ವಿಧಾನವನ್ನು ರೂಪಿಸಿಲ್ಲ. ಶಾಲೆಗಳು ಈ ವಿಷಯಕ್ಕೆ ಸಂಬಂಧಿಸಿದ ಅಂಕಿ-ಅಂಶಗಳ ಮಾಹಿತಿಯನ್ನು ಸರ್ಕಾರಕ್ಕೆ ಕೊಡಲೇಬೇಕೆಂಬ ಕಡ್ಡಾಯವೇನಿಲ್ಲ.

## ಲೈಂಗಿಕ ದೌರ್ಜನ್ಯ

ಲೈಂಗಿಕ ಅಪರಾಧಗಳಿಂದ ಮಕ್ಕಳನ್ನು ರಕ್ಷಿಸುವ ಕಾಯ್ದೆ, 2012ರ (ಪೋಕ್ಸೊ ಕಾಯ್ದೆ) ಕೆಳಗೆ, ಬಲಾತ್ಕಾರದ ಲೈಂಗಿಕಕ್ರಿಯೆ (ಶಿಶ್ನವನ್ನು ಬಲವಂತವಾಗಿ ಬಾಯಲ್ಲಿ ಅಥವಾ ಯೋನಿ/ಗುದದಲ್ಲಿ ತೂರಿಸುವುದು (ಪೆನೆಟ್ರೇಟಿವ್) ಅಥವಾ ಲೈಂಗಿಕ ದೌರ್ಜನ್ಯ ಅಥವಾ ಆಡಳಿತ ಮಂಡಳಿಯಲ್ಲಿರುವ ಯಾವುದೇ ವ್ಯಕ್ತಿಯಿಂದ ಅಥವಾ ಶಿಕ್ಷಣ ಸಂಸ್ಥೆಯ ಯಾವುದೇ ಸಿಬ್ಬಂದಿಯಿಂದ ಲೈಂಗಿಕ ದೌರ್ಜನ್ಯ ನಡೆದರೆ ಅದು ಹೆಚ್ಚು ಗಂಭೀರವಾದ ಅಪರಾಧ ಎನಿಸಿಕೊಳ್ಳುತ್ತದೆ ಮತ್ತು ತೀವ್ರ ಶಿಕ್ಷೆಗೆ ಗುರಿಯಾಗುತ್ತದೆ[7]. ಯಾವುದೇ ವ್ಯಕ್ತಿಗೆ, ಲೈಂಗಿಕ ಅಪರಾಧ ನಡೆಯುವ ಸಾಧ್ಯತೆ ಇದೆ ಎಂಬ ಆತಂಕ ಇದ್ದರೆ ಅಥವಾ ಅಂತಹ ಅಪರಾಧವೊಂದು ನಡೆದಿರುವ ಕುರಿತು ಮಾಹಿತಿಯಿದ್ದರೆ ಅದನ್ನು ಪೋಲಿಸರಿಗೆ ತಿಳಿಸಬೇಕಾದದ್ದು ಅವರ ಜವಾಬ್ದಾರಿ ಎಂದೂ ಸಹ ಪೋಕ್ಸೊ ಕಾಯ್ದೆ ಹೇಳುತ್ತದೆ[8]. ಲೈಂಗಿಕ ಅಪರಾಧ ನಡೆದಿರುವುದನ್ನು ತಿಳಿಸಲು ವಿಫಲರಾಗುವುದೂ ಒಂದು ಶಿಕ್ಷಾರ್ಹ ಅಪರಾಧವಾಗಿದ್ದು, ಆರು ತಿಂಗಳವರೆಗೂ ಬಂಧನ ಅಥವಾ ದಂಡ ಅಥವಾ ಎರಡನ್ನೂ ವಿಧಿಸಬಹುದು[9]. ಯಾವುದೇ ಒಂದು ಸಂಸ್ಥೆಯ ಉಸ್ತುವಾರಿವಹಿಸಿಕೊಂಡಿರುವ ವ್ಯಕ್ತಿಯು ತನ್ನ ನಿಯಂತ್ರಣದಲ್ಲಿರುವ ಕೈಕೆಳಗಿನವರು ಮಾಡಿದ ಅಪರಾಧವನ್ನು ತಿಳಿಸಲು ವಿಫಲರಾದರೆ, ಅಂತಹ ವ್ಯಕ್ತಿಗೆ ಒಂದು ವರ್ಷದವರೆಗೂ ಬಂಧನ ಹಾಗೂ ದಂಡವನ್ನು ಶಿಕ್ಷೆಯಾಗಿ ವಿಧಿಸಬಹುದಾಗಿದೆ[10]. ಶಾಲಾ ಆವರಣಗಳೊಳಗೆ ನಡೆದ ಲೈಂಗಿಕ ಅಪರಾಧಗಳ ಕೆಲವು ಪ್ರಕರಣಗಳಲ್ಲಿ, ಅಂತಹ ಶಾಲೆಯ ಮುಖ್ಯೋಪಾಧ್ಯಾಯರು ಹಾಗೂ ಆಡಳಿತ ಮಂಡಳಿಯ ಸದಸ್ಯರ ವಿರುದ್ಧ ಈ ನಿಬಂಧನೆಗಳನ್ನು ಅನುಸರಿಸಲಾಗಿದೆ. ಪ್ರಕರಣವನ್ನು ದಾಖಲಿಸಲು ವಿಫಲರಾದ ವ್ಯಕ್ತಿಯ ಮೇಲೆ ಯಾವಾಗ ಮೊಕದ್ದಮೆಯನ್ನು ಹೂಡಬಹುದು ಎನ್ನುವುದರ ಕುರಿತು ಕಾನೂನಿನ ವಿವಾದವೊಂದು ಇದೆ. ಶಾಲಾ ಮುಖ್ಯೋಪಾಧ್ಯಾಯರ ವಿರುದ್ಧ ದಾಖಲಾಗಿದ್ದ ಒಂದು ಪ್ರಕರಣದಲ್ಲಿ ಯಾವುದೇ ವ್ಯಕ್ತಿಯ ವಿರುದ್ಧ ಪ್ರಾಥಮಿಕ ಅಪರಾಧವನ್ನು ಯಾವುದೇ ಅನುಮಾನಕ್ಕೆ ಎಡೆಯಿರದಂತೆ ಸಾಬೀತಾಗುವವರೆಗೂ ವಿಚಾರಣೆ ಆರಂಭಿಸುವ ಹಾಗಿಲ್ಲ ಎಂದು ಛತ್ತೀಸ್‌ಗಢ ಉಚ್ಚ ನ್ಯಾಯಾಲಯವು ಅಭಿಪ್ರಾಯಪಟ್ಟಿದೆ[11]. ಆದರೆ, ಒಂದು ಪ್ರಕರಣದಲ್ಲಿ ಸಂಸ್ಥೆಯನ್ನು ನಡೆಸುತ್ತಿದ್ದ ನಿರ್ದೇಶಕರು, ಸಂತ್ರಸ್ತೆಗೆ ಹಾಗೂ ಆಕೆಯ ಬಂಧುಗಳಿಗೆ ಆಕೆಯ ಮೇಲೆ ಅತ್ಯಾಚಾರ ಮಾಡಿದವನು ಎಂದು ಆರೋಪಿಸಲಾದ ವ್ಯಕ್ತಿಯೊಂದಿಗೆ ವಿಷಯವನ್ನು ಬಗೆಹರಿಸಿಕೊಳ್ಳಬೇಕೆಂದು ಹೇಳಿದ್ದನ್ನು ಮುಂಬಯಿ ಉಚ್ಚ ನ್ಯಾಯಾಲಯವು ತಳ್ಳಿಹಾಕಿತು[12]. ಛತ್ತೀಸ್‌ಗಢ ಉಚ್ಚ ನ್ಯಾಯಾಲಯದ ವ್ಯಾಖ್ಯಾನವು, ಮಕ್ಕಳನ್ನು ಲೈಂಗಿಕ ಅಪರಾಧಗಳಿಂದ ರಕ್ಷಿಸಬೇಕೆಂಬ ಪೋಕ್ಸೊದ ಉದ್ದೇಶಗಳನ್ನು ವಿಫಲಗೊಳಿಸುತ್ತದೆ ಎಂದು ಮುಂಬಯಿ ಉಚ್ಚ ನ್ಯಾಯಾಲಯವು ಹೇಳಿತು.

ಪೋಕ್ಸೊ ಕಾಯ್ದೆಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ರಾಜ್ಯ ಸರ್ಕಾರಗಳು ಇನ್ನೂ ಹೆಣಗಾಡುತ್ತಿವೆ. ಕಾಯ್ದೆಯು ಪ್ರತ್ಯೇಕ ಪಬ್ಲಿಕ್ ಪ್ರಾಸಿಕ್ಯೂಟರ್ ಅನ್ನು (ಸರ್ಕಾರಿ ವಕೀಲ) ನೇಮಿಸಬೇಕೆಂದು ಸೂಚಿಸಿದ್ದರೂ ಸಹ, ಯಾವುದೇ ನೇಮಕಾತಿಗಳನ್ನು ಮಾಡಿಲ್ಲ. ಈಗಿರುವ ಪ್ರಾಸಿಕ್ಯೂಟರ್‌ಗಳು (ಸರ್ಕಾರಿ ವಕೀಲರು) ಹಾಗೂ ಸೆಷನ್ಸ್ ನ್ಯಾಯಾಲಯಗಳೇ ಇತರ ಅಪರಾಧ ಪ್ರಕರಣಗಳ ಜೊತೆಗೇ ಈ ಪ್ರಕರಣಗಳನ್ನು ನಡೆಸುತ್ತಿವೆ[13]. ಈ ನ್ಯಾಯಾಲಯಗಳು ತಮ್ಮ ಸಂರಚನೆಯಲ್ಲಿ ಮಕ್ಕಳ-ಸ್ನೇಹಿಯಾಗಿಲ್ಲ ಮತ್ತು ವಿಶೇಷ ಚೇತನರಾದ ಮಕ್ಕಳಿಗೆ ತಲುಪುವ ನಮ್ಯತೆ ಹೊಂದಿಲ್ಲ. ಮಗುವಿಗೆ ತನಿಖೆ ಹಾಗೂ ವಿಚಾರಣೆಯ ಪ್ರಕ್ರಿಯೆಯಲ್ಲಿ ಭಾಗವಹಿಸಲು ನೆರವು ನೀಡುವ ವ್ಯಕ್ತಿಗಳ ಒಂದು ತಂಡ ಎಲ್ಲ ಜಿಲ್ಲೆಗಳಲ್ಲೂ ಲಭ್ಯವಿಲ್ಲ[14]. ಸಂತ್ರಸ್ತರು ಹಾಗೂ ಸಾಕ್ಷಿದಾರರಿಗೆ ರಕ್ಷಣಾ ವ್ಯವಸ್ಥೆ ಇಲ್ಲದಿದ್ದರೆ, ಮಕ್ಕಳು ಮತ್ತು ಅವರ ಕುಟುಂಬದವರು ಆರೋಪಿಗಳಿಂದ ಒತ್ತಡಗಳನ್ನು ಹಾಗೂ ಬೆದರಿಕೆಯನ್ನು ಎದುರಿಸುತ್ತಾರೆ. ಅದರ ಪರಿಣಾಮವಾಗಿ ಅವರು ನ್ಯಾಯಾಲಯದಲ್ಲಿ ತಮ್ಮ ಹೇಳಿಕೆಗಳನ್ನು ಹಿಂತೆಗೆದುಕೊಳ್ಳುತ್ತಾರೆ. ಉದಾಹರಣೆಗೆ, ದೆಹಲಿಯಲ್ಲಿ ಪೋಕ್ಸೊ ಕಾಯ್ದೆ, 2012ರ ಕೆಳಗೆ ಕೆಲಸ ಮಾಡುತ್ತಿರುವ ವಿಶೇಷ ನ್ಯಾಯಾಲಯಗಳನ್ನು ಅಧ್ಯಯನಕ್ಕೆ ಒಳಪಡಿಸಿದಾಗ ಕಂಡು ಬಂದ ಅಂಶವೆಂದರೆ, ಶಿಕ್ಷಕರು ಆರೋಪಿಗಳಾಗಿದ್ದಂತಹ ಎಂಟು ಪ್ರಕರಣಗಳೊಳಗೆ ಆರರಲ್ಲಿ, ಮಕ್ಕಳು ನಕಾರಾತ್ಮಕವಾಗಿ ಪ್ರತಿಕ್ರಿಯಿಸಿದರು[15]. ಅಸ್ಸಾಂನಲ್ಲಿ ನಡೆಸಿದ ಇದೇ ತರಹದ ಒಂದು

---

[6] *Advisory for Eliminating Corporal Punishment in Schools under Section 35(1) of the RTE Act, 2009, Paras 7.1.13-14*

[7] *POCSO Act, Sections 5(f), 7, 9(f), and 10.*

[8] *POCSO Act, Section 19(1).*

[9] *POCSO Act, Section 21(1).*

[10] *POCSO Act, Section 21(2).*

[11] *Kamal Prasad Patade v. State of Chhattisgarh, Writ Petition (Cr.) No. 8 of 2016.*

[12] *Balasaheb @ Suryakant Yashwantrao Mane v. State of Maharashtra, Criminal Revision Application No. 69 of 2017 decided on 22 March 2017.*

[13] *Sonia Pereira & Swagata Raha, Structural Compliance of Special Courts with the POCSO Act, 2012, Chapter 1, pp.1-10 in CCL-NLSIU, Implementation of the POCSO Act, 2012 by Special Courts: Challenges and Issues (2018) available at https://www.nls.ac.in/ccl/jjdocuments/posco2012spcourts.pdf*

[14] *Sonia Pereira & Swagata Raha, Procedural Compliance of Special Courts with the POCSO Act, 2012, Chapter 2, pp.11-29 at 26-27 in CCL-NLSIU, Implementation of the POCSO Act, 2012 by Special Courts: Challenges and Issues (2018) available at https://www.nls.ac.in/ccl/jjdocuments/posco2012spcourts.pdf*

[15] *CCL-NLSIU, Report of Study on the Working of Special Courts under the POCSO Act, 2012 in Delhi, 29 January 2016, p.68 available at https://www.nls.ac.in/ccl/jjdocuments/specialcourtPOSCOAct2012.pdf*

ಅಧ್ಯಯನವು, ಎರಡನೇ ತರಗತಿಯ ಎರಡು ಮಕ್ಕಳು ಶಿಕ್ಷಕರು ತಮ್ಮ ಜನನಾಂಗಗಳನ್ನು ಮುಟ್ಟಿದ್ದರು ಎಂದು ಆರೋಪಿಸಿದ್ದರು ಎಂದು ದಾಖಲಿಸುತ್ತದೆ. ಆದರೆ, ನ್ಯಾಯಾಲಯದಲ್ಲಿ ಈ ಮಕ್ಕಳು, 'ಶಿಕ್ಷಕರು ಎಲ್ಲ ಮಕ್ಕಳಿಗೂ ವಾತ್ಸಲ್ಯ ತೋರಿಸಿದ್ದರು, ಲೈಂಗಿಕವಾಗಿ ದುರುಪಯೋಗಪಡಿಸಿಕೊಂಡಿರಲಿಲ್ಲ' ಎಂದು ಬಿಟ್ಟರು[16]. ಮಹಾರಾಷ್ಟ್ರದ ಪೋಕ್ಸೊ ವಿಶೇಷ ನ್ಯಾಯಾಲಯಗಳ 1330 ತೀರ್ಪುಗಳನ್ನು ಅಧ್ಯಯನ ಮಾಡಿದಾಗ, ಆರೋಪಿಗಳಲ್ಲಿ ಶೇಕಡಾ 3ರಷ್ಟು ಶಿಕ್ಷಕರು ಇದ್ದರು ಹಾಗೂ ಈ ಪ್ರಕರಣಗಳಲ್ಲಿ ಶೇಕಡಾ 53ರಷ್ಟು ಪ್ರಕರಣಗಳಲ್ಲಿ ಸಂತ್ರಸ್ತ ಮಕ್ಕಳು ನಕಾರಾತ್ಮಕವಾಗಿ ಪ್ರತಿಕ್ರಿಯಿಸಿದ್ದರು[17]. ಆರೋಪಿಗಳು ಮಕ್ಕಳಿಗಿಂತ ಮೇಲಿನ ಅಧಿಕಾರದ ಸ್ಥಾನದಲ್ಲಿ ಇರುವಂತಹ ಇಂತಹ ಪ್ರಕರಣಗಳಲ್ಲಿ, ಮಕ್ಕಳು ಹಾಗೂ ಅವರ ಕುಟುಂಬದವರು ವಿಚಾರಣೆಯಲ್ಲಿ ಯಾವುದೇ ರೀತಿಯ ಭಯ ಮತ್ತು ಒತ್ತಡಗಳಿಲ್ಲದೆ ಭಾಗವಹಿಸುವಂತೆ ಮಾಡಬೇಕೆಂದರೆ, ಶಾಲೆಯ ಒಳಗೆ ಮತ್ತು ಹೊರಗೂ ಸಹ ಗಟ್ಟಿಯಾದ ಬೆಂಬಲ ನೀಡುವ ವ್ಯವಸ್ಥೆ ಅವಶ್ಯಕ ಎಂದು ಸಾಬೀತುಪಡಿಸುತ್ತವೆ.

## ಕ್ರೌರ್ಯ

ವಿಧಿ 75, ಬಾಲನ್ಯಾಯಿಕ ತಿದ್ದುಪಡಿವಿಧೇಯಕ (ಮಕ್ಕಳ ಆರೈಕೆಮತ್ತು ರಕ್ಷಣೆ) ಕಾಯ್ದೆ, 2015 (ಜೆ.ಜೆ. ಕಾಯ್ದೆ), ಇದು ಒಂದು ಮಗುವಿನ ಮೇಲೆ ನಿಯಂತ್ರಣ ಹೊಂದಿರುವ, ವಾಸ್ತವಿಕ ಉಸ್ತುವಾರಿಯಾಗಿರುವ ಒಬ್ಬ ವ್ಯಕ್ತಿಯು ಮಾಡಬಹುದಾದ ದಾಳಿ, ಪರಿತ್ಯಾಗ, ದೌರ್ಜನ್ಯ ನಡೆಸುವುದು, ಮಗುವನ್ನು ಉಪೇಕ್ಷಿಸುವುದು ಹೀಗೆ ಯಾವುದೇ ರೀತಿಯಲ್ಲಿ ಮಗುವಿಗೆ ಅನವಶ್ಯಕವಾದ ದೈಹಿಕ ಅಥವಾ ಮಾನಸಿಕ ಹಿಂಸೆಯನ್ನುಂಟು ಮಾಡುವುದನ್ನು ಅಪರಾಧ ಎಂದು ವರ್ಗೀಕರಿಸುತ್ತದೆ. ಶಾಲೆ ಮುಂತಾದ ಮಗುವಿಗೆ, ಭದ್ರತೆಯನ್ನು ಕಾಳಜಿಯನ್ನು ಒದಗಿಸಬೇಕಾದ ಸಂಸ್ಥೆಯೊಂದರಲ್ಲಿ ಕೆಲಸ ಮಾಡುತ್ತಿರುವ ಅಥವಾ ಅದನ್ನು ನಡೆಸುತ್ತಿರುವ ವ್ಯಕ್ತಿಯೇ ಅಪರಾಧವನ್ನು ಎಸಗಿದಲ್ಲಿ ಹೆಚ್ಚಿನ ಶಿಕ್ಷೆಯನ್ನು ವಿಧಿಸುವ ಅವಕಾಶವೂ ಇದೆ. ಶಾಲೆಗಳಲ್ಲಿ ದೈಹಿಕ ದಂಡನೆ ವಿಧಿಸಿದಲ್ಲಿ ಅದಕ್ಕೆ ಶಿಕ್ಷಣ ಹಕ್ಕು ಕಾಯ್ದೆ 2009(ಆರ್.ಟಿ.ಇ.)ರ ಅಡಿಯಲ್ಲಿ ಶಿಕ್ಷೆ ಇಲ್ಲದಿದ್ದರೂ, ಬಾಲನ್ಯಾಯಿಕ ತಿದ್ದುಪಡಿ ವಿಧೇಯಕದ (ಜೆ ಜೆ) ಅಡಿಯಲ್ಲಿ ಈ ವಿಧಿಯನ್ನು, ಭಾರತೀಯ ದಂಡ ಸಂಹಿತೆಯಲ್ಲಿನ ಇದಕ್ಕೆ ಸಂಬಂಧಿಸಿದ ಇತರ ಕಾಯ್ದೆಗಳ ಜೊತೆಗೆ ಅನ್ವಯಿಸಬಹುದು. ಆದರೆ ವಾಸ್ತವ ಆಚರಣೆಯಲ್ಲಿ ಕಂಡುಬರುವುದೇನೆಂದರೆ ದೈಹಿಕ ಶಿಕ್ಷೆಗೆ ಸಂಬಂಧಿಸಿದ ಅಥವಾ ಮಕ್ಕಳ ಮೇಲೆ ನಡೆಯುವ ಇನ್ನಾವುದೇ ಅಪರಾಧಗಳಿಗೆ ಸಂಬಂಧಿಸಿದಂತೆ ಇರುವ ವಿಧಿಗಳನ್ನು ಜಾರಿಗೊಳಿಸುವಲ್ಲಿ ಎದುರಿಸುವ ಕೆಲವೊಂದು ಸವಾಲುಗಳೆಂದರೆ ದೀರ್ಘಕಾಲದವರೆಗೂ ಎಳೆದುಕೊಂಡು ಹೋಗುವ ಕಾನೂನು ಕ್ರಮಗಳು ಮತ್ತು ಅಪರಾಧ ಸಂಬಂಧಿ ನ್ಯಾಯ ವಿತರಣೆಯ ವ್ಯವಸ್ಥೆಯನ್ನು ಹಾದು ಹೋಗುವಲ್ಲಿ ಮಗುವಿಗೂ ಮತ್ತು ಮಗುವಿನ ಕುಟುಂಬಕ್ಕೂ ಬೆಂಬಲ ಸಿಗದಿರುವುದು.

ಪ್ರತಿಬಂಧಕ ಕ್ರಮಗಳು ಮತ್ತು ಪರಿಹಾರ ಪ್ರಕ್ರಿಯೆಗಳು ಸೇರಿದಂತೆ, ಶಾಲೆಯಲ್ಲಿನ ಮಕ್ಕಳ ಸುರಕ್ಷತೆ ಮತ್ತು ಭದ್ರತೆಗೆ ಸಂಬಂಧಿಸಿದಂತೆ ಅತ್ಯಂತ ಸಮಗ್ರ ಮಾರ್ಗದರ್ಶಿ ಸೂತ್ರವೆಂದರೆ 2014ರ ಎಮ್.ಎಚ್.ಆರ್.ಡಿ.ಡಿ.ಓ.[18] ಆಗಿದ್ದು, ಅದು ಹೇಳುವುದೇನೆಂದರೆ, ರಾಜ್ಯ ಸರ್ಕಾರವು ಒಂದು ಶಾಲೆಗೆ ಎನ್ ಓ ಸಿ (ನಿರಾಕ್ಷೇಪಣಾ ಪತ್ರ) ನೀಡಲು/ಮಾನ್ಯತೆ ನೀಡಲು ಹಾಗೂ ಅದೇ ರೀತಿಯಲ್ಲಿ ರಾಜ್ಯ ಮಂಡಳಿಯು ಸಂಯೋಜನಾ ಸದಸ್ಯತ್ವವನ್ನು ನೀಡಲು:– ಸಂಸ್ಥೆಯ ಮಕ್ಕಳಿಗೆ ಸುರಕ್ಷಿತವಾದ ಹಾಗೂ ಸುಭದ್ರವಾದ ಪರಿಸರವನ್ನು ನೀಡುವುದು, ದೈಹಿಕ ಶಿಕ್ಷೆ ಮತ್ತು ದೌರ್ಜನ್ಯ ನಡೆಯದಂತೆ ನೋಡಿಕೊಳ್ಳುವುದು, ಮಕ್ಕಳು ಭೌತಿಕವಾಗಿ ಮತ್ತು ಸಮಾಜೋ–ಮಾನಸಿಕವಾಗಿ ಸುರಕ್ಷಿತವಾಗಿರುವುದನ್ನು ಖಾತ್ರಿಪಡಿಸಲು ಪ್ರತಿಬಂಧಕ ಕ್ರಮಗಳನ್ನು ತೆಗೆದುಕೊಳ್ಳುವುದು ಇವೆಲ್ಲವೂ ಷರತ್ತುಗಳಲ್ಲಿ ಮುಖ್ಯವಾಗಿರಬೇಕು ಎಂದು ಹೇಳುತ್ತದೆ. ಕೆಲವು ವಿಷಯಗಳ ಬಗ್ಗೆ ಡಿ .ಓ. ತೀರಾ ನಿರ್ದಿಷ್ಟವಾಗಿ ಸೂಚನೆ ನೀಡುತ್ತದೆ, ಅವೆಂದರೆ; ಶಾಲೆಯ ಪ್ರಾಕಾರದ ಗೋಡೆ, ಆಕ್ಷೇಪಾರ್ಹ ವಸ್ತುಗಳನ್ನು ಮಾರಾಟ ಮಾಡದಂತೆ ನಿಷೇಧ, ಶಾಲೆಗೆ ತೆರಳುವ ದಾರಿ, ಶಾಲಾ ಬಸ್ಸುಗಳ ಬಣ್ಣ, ಕಟ್ಟಡ ಸುರಕ್ಷಿತತೆಯ ಕುರಿತು ಪರಿಶೋಧನೆ, ಅಸ್ತಿತ್ವದಲ್ಲಿರುವ ಕಟ್ಟಡಗಳ ದೋಷಗಳನ್ನು ದುರಸ್ಥಿ ಮಾಡಿ ಸುಸ್ಥಿತಿಯಲ್ಲಿಡುವುದು, ಪ್ರತಿಯೊಂದು ಶಾಲೆಯಲ್ಲೂ ವಿಪತ್ತಿನ ಸಂದರ್ಭವನ್ನು ಎದುರಿಸಲು ಸಿದ್ಧತೆ ಮತ್ತು ಪ್ರತಿಸ್ಪಂದನೆ ಯೋಜನೆಯನ್ನು ರಚಿಸಿಕೊಂಡಿರುವುದು, ಶಿಕ್ಷಕರು ಮತ್ತಿತರ ಸಿಬ್ಬಂದಿಯ ಪೂರ್ವಾಪರಗಳ ಕುರಿತು ಪರಿಶೀಲನೆ, ಭೌತಿಕ ಸುರಕ್ಷಿತತೆಗೆ ಸಂಬಂಧಿಸಿದಂತೆ ಇರುವ ಮಕ್ಕಳ ಹಕ್ಕಿನ ಕುರಿತು ಅವರಿಗೆ ನಿರಂತರವಾಗಿ ಶಿಕ್ಷಣ ಕೊಡುವುದು ಇತ್ಯಾದಿ. ಆರೋಗ್ಯ ಮತ್ತು ಶುಚಿತ್ವಕ್ಕೆ ಸಂಬಂಧಿಸಿದಂತೆ ಮಾರ್ಗದರ್ಶಿ ಸೂತ್ರಗಳೆಂದರೆ: ಕುಡಿಯುವ ನೀರಿನ ಮೂಲ, ಅದನ್ನು ಸಂಗ್ರಹಿಸುವುದು ಹಾಗೂ ಶುದ್ಧೀಕರಿಸುವುದು, ಹುಡುಗರಿಗೆ ಮತ್ತು ಹುಡುಗಿಯರಿಗೆ ಪ್ರತ್ಯೇಕವಾದ ಹಾಗೂ ಸುಸ್ಥಿತಿಯಲ್ಲಿರುವ ಶೌಚಾಲಯಗಳು, ಶಾಲಾ ಆವರಣದಲ್ಲಿ ಮತ್ತು ಮಕ್ಕಳಿಗೆ ಸಂಬಂಧಿಸಿದಂತೆ ಸಾಮಾನ್ಯ ಶುಚಿತ್ವದ ಕುರಿತು ನಿಯತವಾಗಿ ಮೇಲ್ವಿಚಾರಣೆ, ಅಡಿಗೆ ಮಾಡುವವರು ಮತ್ತು ಸಹಾಯಕರಿಗೆ ಮಧ್ಯಾಹ್ನದ ಬಿಸಿಯೂಟವು ಸುರಕ್ಷಿತವಾಗಿರುವಂತೆ, ಪೌಷ್ಟಿಕವಾಗಿರುವಂತೆ ನೋಡಿಕೊಳ್ಳಲು ತರಬೇತಿ ನೀಡುವುದು, ಶಿಕ್ಷಕರು– ರೋಗಗಳು, ಪೌಷ್ಟಿಕಾಂಶದ ಕೊರತೆಗಳನ್ನು ತಡೆಗಟ್ಟುವ ಕ್ರಮಗಳನ್ನು ಕೈಗೊಳ್ಳುವುದು ಮತ್ತು ಮಾದಕದ್ರವ್ಯಗಳ ಸೇವನೆ ಇವುಗಳ– ಬಗ್ಗೆ ನಿಗಾ ಇಡುವುದು. ಇನ್ನು ಲೈಂಗಿಕ ದೌರ್ಜನ್ಯಕ್ಕೆ ಸಂಬಂಧಿಸಿದಂತೆ ಮಾರ್ಗದರ್ಶಿ ಸೂತ್ರವು, ಸದುದ್ದೇಶ (ಒಳ್ಳೆಯ) ಸ್ಪರ್ಶ ಮತ್ತು ದುರುದ್ದೇಶ (ಕೆಟ್ಟ) ಸ್ಪರ್ಶಗಳ ಮಧ್ಯದ ವ್ಯತ್ಯಾಸವನ್ನು ಗುರುತಿಸಲು ಮಕ್ಕಳಿಗೆ ಕಲಿಸಬೇಕು. ಮಕ್ಕಳು ಧೈರ್ಯವಾಗಿ ಮುಕ್ತವಾಗಿ ನಡೆದದ್ದನ್ನು ಹೇಳಲು ಕಲಿಸಬೇಕು ಮತ್ತು ಶಾಲೆಯ ವ್ಯವಸ್ಥಾಪಕ ಮಂಡಳಿಯು ಮಕ್ಕಳು ಯಾವುದೇ ದೌರ್ಜನ್ಯ ನಡೆದರೂ ಅದರ ಬಗ್ಗೆ ವರದಿ ಮಾಡಲು ಸಾಧ್ಯವಾಗುವಂತಹ ಶಾಲಾ ಪರಿಸರವನ್ನು ನಿರ್ಮಿಸಬೇಕು ಎಂದು ಕಡ್ಡಾಯಗೊಳಿಸಿದೆ.

ಶಾಲೆಯಲ್ಲಿ ಮಕ್ಕಳ ಭದ್ರತೆಯನ್ನು ರಕ್ಷಿಸಲೋಸುಗ ಕೆಲವೊಂದು ರಾಜ್ಯ ಸರ್ಕಾರಗಳು ನಿರ್ದಿಷ್ಟ ಕಾಯ್ದೆಗಳನ್ನು ಅಳವಡಿಸಿಕೊಂಡಿವೆ.

---

[16] *CCL-NLSIU, Study on the Working of Special Courts under the POCSO Act, 2012 in Assam, 13 February 2017, p.51 available at https://www.nls.ac.in/ccl/jjdocuments/studyspecialcourtassamPOSCOAct2012.pdf*

[17] *CCL-NLSIU, Study on the Working of Special Courts under the POCSO Act, 2012 in Maharashtra, 7 September 2017, pp.67, 69 available at https://www.nls.ac.in/ccl/jjdocuments/POSCOMaharashtrasummary.pdf*

[18] *D.O. No. 10-11/2014-EE.4 dated 9 October 2014.*

ಉದಾಹರಣೆಗೆ 2014ರ ಮೇ ತಿಂಗಳಿನಲ್ಲಿ ದೆಹಲಿಯ ಮಕ್ಕಳ ಹಕ್ಕು ರಕ್ಷಣಾ ಆಯೋಗವು ಶಾಲೆಗಳಲ್ಲಿ ಮಕ್ಕಳ ಮೇಲಿನ ದೌರ್ಜನ್ಯವನ್ನು ತಡೆಗಟ್ಟಲು ಮಾರ್ಗದರ್ಶಿ ಸೂತ್ರಗಳನ್ನು ಬಿಡುಗಡೆ ಮಾಡಿತು[19]. ಅದು ನಿರ್ದಿಷ್ಟ ತತ್ತ್ವಗಳನ್ನು, ಉದ್ಯೋಗ ನೇಮಕಾತಿ, ತರಬೇತಿ ಮತ್ತು ಸಾಮರ್ಥ್ಯ ಸೃಷ್ಟಿಗೆ ಸಂಬಂಧಿಸಿದ ಮಾರ್ಗದರ್ಶಿ ಸೂತ್ರಗಳನ್ನು ನಿರ್ದಿಷ್ಟವಾಗಿ ಪಟ್ಟಿ ಮಾಡಿದ್ದು ಅದರಲ್ಲಿ ಮಗುವಿನ ಸಂರಕ್ಷಣಾ ನೀತಿ ಮತ್ತು ದೂರು ಸಲ್ಲಿಕೆ ವ್ಯವಸ್ಥೆಯೂ ಸೇರಿದಂತೆ ಶಾಲೆಯೊಳಗಡೆ ಮಕ್ಕಳ ಸಂರಕ್ಷಣೆಯ ಭದ್ರತಾ ಕ್ರಮಗಳೂ ಇರುತ್ತವೆ. ಮಾರ್ಗದರ್ಶಿ ಸೂತ್ರಗಳಲ್ಲಿ ಸಲಹಾ ಸೇವೆಗಳಂತಹ ಚಿಕಿತ್ಸಕ ಕ್ರಮಗಳನ್ನು ಹೆಸರಿಸಲಾಗಿದ್ದು, ಸಂಸ್ಥೆಯ ಒಳಗಡೆ ಸಲಹಾ ಕೇಂದ್ರಗಳನ್ನು ರಚಿಸುವುದೂ ಸೇರಿದೆ. ಆದರೆ ಈ ಮಾರ್ಗದರ್ಶಿ ಸೂತ್ರಗಳು ಕಡ್ಡಾಯವಲ್ಲ. ಶಾಲೆಯಲ್ಲಿ ಮಕ್ಕಳ ಮೇಲೆ ನಡೆಯುತ್ತಿರುವ ಲೈಂಗಿಕ ದೌರ್ಜನ್ಯಗಳ ಹಿನ್ನೆಲೆಯಲ್ಲಿ 2016ರಲ್ಲಿ, ಕರ್ನಾಟಕ ಪೊಲೀಸ್ (ತಿದ್ದುಪಡಿ) ಕಾಯ್ದೆ 2016[20] ಅನ್ನು ಸದನದಲ್ಲಿ ಅಂಗೀಕರಿಸಿ, ಶಾಲೆಯ ಚಟುವಟಿಕೆಗಳ ಮೇಲೆ ಪರಿಣಾಮಕಾರಿಯಾಗಿ ನಿಗಾ ಇಡಲು ಹಾಗೂ ನಿಯಂತ್ರಿಸಲು ಪೊಲೀಸರಿಗೆ ಅಧಿಕಾರವನ್ನು ನೀಡಲಾಯಿತು. ಸಾರ್ವಜನಿಕ ಸ್ಥಳಗಳಲ್ಲಿ ಸುವ್ಯವಸ್ಥೆಯನ್ನು ಕಾಪಾಡಲು ಆಜ್ಞೆ ಮಾಡಬಲ್ಲ ಅಧಿಕಾರವನ್ನು ಪೊಲೀಸ್ ಆಯುಕ್ತರಿಗೆ ಮತ್ತು ಜಿಲ್ಲಾ ದಂಡಾಧಿಕಾರಿಗಳಿಗೆ ನೀಡಿದ್ದ 31(1) ವಿಧಿಗೆ ತಿದ್ದುಪಡಿ ಮಾಡಿ, ಅದರಲ್ಲಿ (2ಎ) ಕಲಮನ್ನು ಸೇರಿಸುವ ಮೂಲಕ, 'ಮಕ್ಕಳ ಭದ್ರತೆ ಮತ್ತು ಸುರಕ್ಷಿತತೆಯ ಮೇಲೆ ನಿಗಾ ಇಡಲು, ನಿಯಂತ್ರಿಸಲು, ಹತೋಟಿಯಲ್ಲಿಡಲು' ಆಜ್ಞೆಗಳನ್ನು ನೀಡುವ ಅಧಿಕಾರವನ್ನು ಸಹಾ ಒದಗಿಸಲಾಯಿತು. ಯಾವುದೇ ಕೇಂದ್ರ ಶಾಸನದಲ್ಲೂ ಶಾಲಾ ಭದ್ರತೆಯ ಬಗ್ಗೆ ಹೇಳಿರದಿದ್ದರೂ, 2017ರಲ್ಲಿ ಕರ್ನಾಟಕ ಶಿಕ್ಷಣ ಕಾಯ್ದೆ 1983ಕ್ಕೆ ತಿದ್ದುಪಡಿ ಮಾಡಿ, ವಿದ್ಯಾರ್ಥಿಗಳ ಸುರಕ್ಷೆ ಮತ್ತು ಭದ್ರತೆ, ದಂಡ ಸಂಹಿತೆಯಡಿಯ ನಿರ್ಬಂಧಗಳು ಮೊದಲಾದ ನಿಬಂಧನೆಗಳನ್ನು ಸೇರಿಸಲಾಯಿತು ಮತ್ತು ಮೇಲೆ ಹೇಳಿದ ನಿಯಮಗಳನ್ನು ಉಲ್ಲಂಘಿಸುವ ಯಾವುದೇ ಸಂಸ್ಥೆಗೆ ನೀಡಿದ್ದ ಮಾನ್ಯತೆ ಅಥವಾ ಸದಸ್ಯತ್ವವನ್ನು ಹಿಂತೆಗೆದುಕೊಳ್ಳಲು ಸಂಬಂಧಪಟ್ಟ ಅಧಿಕಾರಿಗಳಿಗೆ ಶಿಫಾರಸು ಮಾಡಲು ಜಿಲ್ಲಾ ಶಿಕ್ಷಣ ನಿಯಂತ್ರಣಾ ಪ್ರಾಧಿಕಾರಕ್ಕೆ ಅಧಿಕಾರವನ್ನು ನೀಡಲಾಯಿತು. ಆದರೆ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಸರ್ಕಾರದಿಂದ ಮಾನ್ಯತೆ ಪಡೆದ ಇಂಗ್ಲಿಷ್ ಮಾಧ್ಯಮ ಶಾಲೆಗಳ ವ್ಯವಸ್ಥಾಪಕ ಒಕ್ಕೂಟವು, ಮೇಲೆ ಹೇಳಿದ ತಿದ್ದುಪಡಿಗಳ ಸಂವಿಧಾನ ಬದ್ಧತೆಯನ್ನು ಪ್ರಶ್ನಿಸಿವೆ. ಅವು ಪೋಕ್ಸೊ ಕಾಯ್ದೆ, ಮಕ್ಕಳ ಹಕ್ಕು ರಕ್ಷಣಾ ಆಯೋಗಗಳ ಕಾಯ್ದೆ 2005[21], ಮುಂತಾದ ಕೇಂದ್ರ ಕಾಯ್ದೆಗಳನ್ನು ಮೀರಿ ಹೋಗುತ್ತವೆ ಮತ್ತು ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಧಿಕ್ಕರಿಸಿ ಖಾಸಗಿ ಶಾಲೆಗಳನ್ನು ತನ್ನ ವ್ಯಾಪ್ತಿಯೊಳಗೆ ತಂದುಕೊಳ್ಳುತ್ತದೆ[22] ಎಂಬ ಆಧಾರದ ಮೇಲೆ ಪ್ರಶ್ನಿಸಿವೆ. ಹೀಗಾಗಿ ಈ ನಿಬಂಧನೆಗಳ ಅನ್ವಯವು ಉಚ್ಚ ನ್ಯಾಯಾಲಯದ ಮುಂದೆ ಪರಿಶೀಲನೆಯಲ್ಲಿ ಇದೆ. ಶಾಲೆಯ ಭದ್ರತೆಯನ್ನು ನಿಯಂತ್ರಿಸುವ ಅಧಿಕಾರವನ್ನು ಪೊಲೀಸರಿಗೆ ಕೊಟ್ಟಿರುವುದೂ ಕೂಡ ಆತಂಕಕ್ಕೆ ಕಾರಣವಾಗಿದೆ, ಏಕೆಂದರೆ ಪ್ರಾಧಿಕಾರಗಳಸಂಖ್ಯೆ ಹೆಚ್ಚಾಗಿ, ಅವೆಲ್ಲವೂ ನೀಡಿರುವ ಮಾರ್ಗದರ್ಶಿ ಸೂತ್ರಗಳಿಂದಾಗಿ ಶಾಲೆಗಳು ಗೊಂದಲಕ್ಕೀಡಾಗಬಹುದು.

ಶಾಲಾ ಭದ್ರತೆಯ ಕುರಿತಾದ ನಿಬಂಧನೆಗಳು ಮತ್ತು ಅನುಷ್ಠಾನದ ಕುರಿತು ನಡೆದಿರುವ ಈ ಚರ್ಚೆಯಲ್ಲಿ ನಾವು ಗಮನಿಸುವುದೇನೆಂದರೆ ಶಾಸನದ ಚೌಕಟ್ಟು ಕೇವಲ ದಂಡನಾತ್ಮಕವಾಗಿದೆ, ಆದರೆ ಒಟ್ಟಾರೆ ನೀತಿ ನಿರ್ದೇಶನದ ಚೌಕಟ್ಟಾದರೋ ಸಮಸ್ಯೆಯನ್ನು ತಡೆಗಟ್ಟುವ ಬಗ್ಗೆ ಹಾಗೂ ಉಲ್ಲಂಘನೆಗಳಾದರೆ ಪರಿಹಾರವನ್ನು ದೊರಕಿಸಿಕೊಡುವ ಬಗ್ಗೆ ಗಮನವನ್ನು ಕೇಂದ್ರೀಕರಿಸಿದೆ. ಆದರೆ ನೀತಿ ನಿರ್ದೇಶನದ ಚೌಕಟ್ಟನ್ನು ಪಾಲಿಸಲಾಗುತ್ತಿದೆಯೋ ಇಲ್ಲವೋ ಎಂಬುದರ ಬಗ್ಗೆ ವ್ಯವಸ್ಥಿತವಾಗಿ ಮೌಲ್ಯಮಾಪನ ಮಾಡಲು ಮೇಲ್ವಿಚಾರಣೆ ಇಲ್ಲ ಮತ್ತು ವಿವಿಧ ಸುತ್ತೋಲೆಗಳು ಹಾಗೂ ನೀತಿಗಳ ಅಡಿಯಲ್ಲಿನ ಕಡ್ಡಾಯ ನಿಯಮಗಳನ್ನು ಅನುಸರಿಸದಿದ್ದರೆ ಪರಿಣಾಮಗಳೇನಾಗುತ್ತವೆ ಎಂಬ ಬಗ್ಗೆಯೂ ಸ್ಪಷ್ಟತೆ ಇಲ್ಲ.

## ಸಮಸ್ಯೆಗಳು

ಮೊದಲನೆಯದಾಗಿ, ರಾಶಿರಾಶಿ ಹೊಸದಾಗಿ ಅಂಗೀಕರಿಸಲಾದ ಶಾಸನಗಳು, ನೀತಿಗಳು, ಮಾರ್ಗದರ್ಶಿ ಸೂತ್ರಗಳು ಇದ್ದರೂ ಕೂಡ ಅನೇಕ ಅಂಶಗಳ ಬಗ್ಗೆ ಸ್ಪಷ್ಟತೆ ಇಲ್ಲ. ಅಧ್ಯಾಪಕರು, ಸಿಬ್ಬಂದಿ, ಆಡಳಿತ ಮಂಡಳಿ ಇವರುಗಳ ನಡುವೆ ಜವಾಬ್ದಾರಿ ಹಂಚಿಕೆ ಹೇಗೆ, ಯಾರು ಯಾವುದಕ್ಕೆ ಹೊಣೆಯಾಗಿರುತ್ತಾರೆ, ಮನೆಯಿಂದ ಶಾಲೆಗೆ ಬರುವಾಗ ಮತ್ತು ಹಿಂದಿರುಗುವಾಗ ವಿದ್ಯಾರ್ಥಿಗಳ ಭದ್ರತೆಗೆ ಯಾರು ಜವಾಬ್ದಾರಿ? ಮತ್ತು ಬಹಳ ಮುಖ್ಯವಾಗಿ, ಪ್ರತಿಬಂಧಕ ಮತ್ತು ಸಂರಕ್ಷಕ ಕ್ರಮಗಳಿಗೆ ಸಂಬಂಧಿಸಿದಂತೆ ಶಾಲೆಗಳು ತೆಗೆದುಕೊಳ್ಳಬೇಕಾದ ಮುಖ್ಯ ಕ್ರಮಗಳು ಯಾವುವು, ಉದ್ಯೋಗಿಗಳ ಹಿನ್ನೆಲೆಯ ಬಗ್ಗೆ ವಿಚಾರಿಸುವುದು, ಮೇಲ್ವಿಚಾರಣೆ ಮತ್ತು ವರದಿಯ ಮಾರ್ಗಗಳು ಮತ್ತು ಅದರಲ್ಲಿ ವಿಫಲರಾದರೆ ಪರಿಣಾಮಗಳು. ಇವೆಲ್ಲವೂ ಸಲಹೆ ಮತ್ತು ಮಾರ್ಗದರ್ಶಿ ಸೂತ್ರಗಳ ರೂಪದಲ್ಲಿರುವುದರಿಂದ ಶಾಲೆಗಳು ಇವುಗಳು ಕಡ್ಡಾಯವಲ್ಲ ಎಂದು ಭಾವಿಸುತ್ತವೆ ಮತ್ತು ಇವುಗಳನ್ನು ಪಾಲಿಸದಿದ್ದರೆ ತತ್ ಕ್ಷಣದಲ್ಲಿ ಯಾವುದೇ ಅಪಾಯ ಇಲ್ಲ ಎಂದು ಅಂದುಕೊಳ್ಳುತ್ತವೆ. ಅಲ್ಲದೆ ಅನೇಕ ನಿಬಂಧನೆಗಳಿಗೆ ಅಗತ್ಯ ಇರುವುದು ಕೇವಲ ಮನೋಭಾವದ ಪರಿವರ್ತನೆಯಲ್ಲ, ಶಾಲೆಗಳನ್ನು ಸಂಘಟಿಸಿರುವ ರೀತಿಯಲ್ಲಿನ, ಧೋರಣೆಗಳಲ್ಲಿನ ಬದಲಾವಣೆ ಅಷ್ಟು ಮಾತ್ರವಲ್ಲ, ಇದರಲ್ಲಿನ ಅನೇಕ ಅಂಶಗಳ ಜಾರಿಗೆ ಹೆಚ್ಚು ಖರ್ಚುವೆಚ್ಚದ ಆಯಾಮವೂ ಇದೆ.

ಇದಲ್ಲದೆ ಶಿಕ್ಷಣ ಸಂಸ್ಥೆಯೊಂದು ಸರ್ಕಾರಿ ಶಾಲೆಯೋ ಅಥವಾ ಖಾಸಗಿ ಶಾಲೆಯೋ, ಒಂದು ವಿಶೇಷ ತರಬೇತಿ ಕೇಂದ್ರವೋ ಅಥವಾ ವಿಶೇಷ ಶಾಲೆಯೋ, ಆಶ್ರಮ ಶಾಲೆಯೋ ಅಥವಾ ಅಂತರರಾಷ್ಟ್ರೀಯ ಶಾಲೆಯೋ ಎಂಬುದರ ಮೇಲೆ ಈ ಸೂಚನೆಗಳು ಬದಲಾಗುತ್ತವೆಯೇ? ಈ ಮೂಲಭೂತ

[19] *Available at http://delhi.gov.in/wps/wcm/connect/983d42804f4cf70fb7e3bf1e0288d2b8/DCPCR+guidelines+14052014 pdf?MOD=AJPERES&lmod=301782569*

[20] *Available at http://dpal.kar.nic.in/ao2016/22%20of%202016%20(E).pdf*

[21] *WP 33161/2017; Schools challenge amendment to Karnataka Education Act, Deccan Herald, 26 July 2017, https://www.deccanherald.com/content/624719/schools-challenge-amendment-karnataka-education.html*

[22] *HC notice to State on amended Karnataka Education Act, The Hindu, 25 July 2017, http://www.thehindu.com/news/national/karnataka/hc-notice-to-state-on-amended-karnataka-education-act/article19360210.ece*

ಅಂಶಗಳನ್ನು ಉತ್ತರಿಸದಿರುವುದು ಮಾತ್ರವಲ್ಲ, ಮಕ್ಕಳು ಅಭ್ಯಾಸ ಮಾಡುತ್ತಿರುವ ವಿಭಿನ್ನ ಸಂಸ್ಥೆಗಳ ಪರಿಸರಕ್ಕೆ ಇವನ್ನು ನಿರ್ದಿಷ್ಟವಾಗಿ ಮಾರ್ಪಡಿಸಿಕೊಂಡು ಅಳವಡಿಸಬೇಕು ಎಂಬುದನ್ನು ಸಹ ಗುರುತಿಸಲಾಗಿಲ್ಲ.

ಎರಡನೆಯದಾಗಿ, ಶಾಲೆಗಳು ಸರ್ಕಾರದ ಸೂಚನಾಪತ್ರಗಳನ್ನು, ಮಾರ್ಗದರ್ಶಿ ಸೂತ್ರಗಳನ್ನು ಸ್ವೀಕರಿಸಿದರೂ ಸಹ, ಸಾಮಾನ್ಯವಾಗಿ ಪೋಷಕರಲ್ಲಿ ಮತ್ತು ವಿಶೇಷವಾಗಿ ಪೋಷಕ-ಶಿಕ್ಷಕ ಸಂಘಗಳಲ್ಲಿ ಮತ್ತು ಶಾಲಾ ವ್ಯವಸ್ಥಾಪಕ ಮಂಡಳಿಗಳಲ್ಲಿ ಈ ನೀತಿನಿರ್ದೇಶನ ನಿಬಂಧನೆಗಳ ಕುರಿತು ತಿಳುವಳಿಕೆಯ ಅಭಾವವಿದೆ. ತತ್ಫಲವಾಗಿ ಈ ಮುಖ್ಯ ಪಾಲುದಾರರು ಶಾಲೆಯಿಂದ ಉತ್ತರದಾಯಿತ್ವವನ್ನು ಆಗ್ರಹಿಸುವಲ್ಲಿ ಮತ್ತು ನಿಬಂಧನೆಗಳನ್ನು ಅನುಸರಿಸುವಂತೆ ನೋಡಿಕೊಳ್ಳುವಲ್ಲಿ ಅಸಮರ್ಥರಾಗಿದ್ದಾರೆ.

ಮೂರನೆಯದಾಗಿ, ಶಾಲೆಗಳು ಶ್ರೇಣೀಕರಣಕ್ಕೆ, ಗೌರವ-ವಿಧೇಯತೆ- ಮೌನಗಳಿಗೆ ಮಹತ್ತ್ವ ನೀಡುವ ಸಂಸ್ಥೆಗಳಾದ್ದರಿಂದ ಮೇಲೆ ಹೇಳಿದ ನಿಬಂಧನೆಗಳನ್ನು ಜಾರಿಗೊಳಿಸುವಲ್ಲಿ ಹೆಚ್ಚು ಸೂಕ್ಷ್ಮತೆಯುಳ್ಳ ಧೋರಣೆಯನ್ನು ಹೊಂದಿರಬೇಕಾಗುತ್ತದೆ ಎಂಬುದನ್ನು ಗುರುತಿಸುವುದು ಮುಖ್ಯ. ಶಾಲೆಯೊಳಗೆ ಒಂದು ಮಗುವಿನ ಮೇಲೆ ಲೈಂಗಿಕ ದೌರ್ಜನ್ಯ ನಡೆದಲ್ಲಿ ಅದು ಹೊರಗಡೆ ನಡೆಯುವುದಕ್ಕಿಂತ ಹೆಚ್ಚು ಭಿನ್ನವಾಗಿರುತ್ತದೆ. ಮಗುವಿಗೆ ಸಂಬಂಧಿಸಿದಂತೆ ವಿಶ್ವಾಸ ಮತ್ತು ಅಧಿಕಾರತ್ವದ ಸ್ಥಾನದಲ್ಲಿರುವವರೇ ದೌರ್ಜನ್ಯ ನಡೆಸುವವರಾದಾಗ ಅಥವಾ ಮಕ್ಕಳು ಶಾಲೆಯಲ್ಲಿ 'ಸ್ಥಳೀಯ ಪೋಷಕರು' ಎನ್ನಿಸಿಕೊಂಡವರ ಅಡಿಯಲ್ಲಿ, ಅವರಿಂದಲೇ ದೌರ್ಜನ್ಯಕ್ಕೆ ಒಳಗಾದಾಗ ಅಪರಾಧದ ಹೊಣೆಯು ಹೆಚ್ಚು ಗುರುತರವಾಗುತ್ತದೆ. ಅದೇನೇ ಇರಲಿ ಶಾಲೆಗಳಲ್ಲಿರುವ ಈ ಶ್ರೇಣೀಕರಣ ಸಂಬಂಧ ಮತ್ತು ಮೌನವನ್ನು ಕಾಯ್ದುಕೊಳ್ಳುವ ಪ್ರವೃತ್ತಿಗಳಿಂದಾಗಿಯೇ ನಿಬಂಧನೆಗಳನ್ನು ಜಾರಿಗೊಳಿಸುವುದು ಕಷ್ಟವಾಗುತ್ತದೆ. ಭಾರತ ಸರ್ಕಾರದ ಮಹಿಳಾ ಹಾಗೂ ಮಕ್ಕಳ ಕಲ್ಯಾಣ ಸಚಿವಾಲಯವು ಐದು ವಿಭಾಗಗಳಿಗೆ ಸೇರಿದ, 13 ರಾಜ್ಯಗಳ (ಇದರಲ್ಲಿ ಕರ್ನಾಟಕ ಸೇರಿರಲಿಲ್ಲ) 12447 ಮಕ್ಕಳನ್ನು ಸಂದರ್ಶಿಸಿ ಮಕ್ಕಳ ಮೇಲಿನ ದೌರ್ಜನ್ಯದ ಬಗ್ಗೆ ವರದಿಯೊಂದನ್ನು ತಯಾರಿಸಿತು. ಆ ಐದು ವಿಭಾಗಗಳೆಂದರೆ: ಕುಟುಂಬ ಪರಿಸರದಲ್ಲಿನ ಮಕ್ಕಳು, ಶಾಲೆಯಲ್ಲಿನ ಮಕ್ಕಳು, ಸಂಸ್ಥೆಯಲ್ಲಿನ ಮಕ್ಕಳು, ಉದ್ಯೋಗದಲ್ಲಿರುವ ಮಕ್ಕಳು ಮತ್ತು ಬೀದಿ ಮಕ್ಕಳು. ಈ ವರದಿಯ ಪ್ರಕಾರ ಶೇಕಡಾ 52.94 ಹುಡುಗಿಯರು ಮತ್ತು ಶೇಕಡಾ 47.06 ಹುಡುಗರು ತಾವು ಒಂದಲ್ಲಾ ಒಂದು ರೀತಿಯ ಲೈಂಗಿಕ ದೌರ್ಜನ್ಯಕ್ಕೆ ಒಳಗಾಗಿರುವುದಾಗಿ ಹೇಳಿಕೊಂಡರು. ಶಾಲೆಗೆ ಹೋಗುವಮಕ್ಕಳಲ್ಲಿ ಅರ್ಧದಷ್ಟು ಜನ ಲೈಂಗಿಕ ದೌರ್ಜನ್ಯಕ್ಕೆ ಒಳಗಾಗಿದ್ದರು ಆದರೆ, ಬಹುತೇಕರು ಯಾವುದೇ ದೂರನ್ನು ದಾಖಲಿಸಿರಲಿಲ್ಲ (ಎಮ್ ಡಬ್ಲ್ಯೂ ಸಿ ಡಿ, ಭಾರತ ಸರ್ಕಾರ, 2007, ಪುಟ 75).

ಆದರೆ ಈ ವರದಿ ಸಹ ಶಾಲೆಯಲ್ಲಿ ಮಕ್ಕಳು ದೌರ್ಜನ್ಯ ಮತ್ತು ಹಿಂಸೆಗೆ ತುತ್ತಾಗುವುದರ ಬಗ್ಗೆ ಪೂರ್ಣ ಚಿತ್ರಣವನ್ನು ನೀಡುವುದಿಲ್ಲ. ಇಲ್ಲಿ ಉದ್ಭವಿಸುವ ಪ್ರಶ್ನೆ ಎಂದರೆ: ಶಾಲೆಯಲ್ಲಿ ನಡೆಯುವ ದೌರ್ಜನ್ಯ ಮತ್ತು ಹಿಂಸೆಯ ಬಗ್ಗೆ ನಮಗೆ ಸಾಕಷ್ಟು ತಿಳಿದುಕೊಳ್ಳಲು ಸಾಧ್ಯವಾಗಿಲ್ಲ. ಇದು ಶಾಲೆಯಲ್ಲಿನ ದೌರ್ಜನ್ಯ ಹಾಗೂ ಹಿಂಸೆಗೆ ಸಂಬಂಧಿಸಿದಂತೆ ಇರುವ ಪಾರದರ್ಶಕತೆ, ಉತ್ತರದಾಯಿತ್ವ ಹಾಗೂ ಗೋಚರತೆಯ ಮಾರ್ಗಗಳನ್ನು ನಾವು ಪ್ರಶ್ನಿಸುವಂತೆ ಮಾಡುತ್ತದೆ. ಶಾಲೆಯಲ್ಲಿರುವ ಶ್ರೇಣೀಕರಣ ವ್ಯವಸ್ಥೆ, ವಿಧೇಯತೆ ಮತ್ತು ಮೌನದ ಸಂಸ್ಕೃತಿಯನ್ನು ಗಣನೆಗೆ ತೆಗೆದುಕೊಂಡರೆ, ಶಾಲಾವೇಳೆಯಲ್ಲಿ ಮಗುವಿನ ಮೇಲೆ ದೌರ್ಜನ್ಯ ನಡೆದರೆ ಅದನ್ನು ನಾವು ತಿಳಿದುಕೊಳ್ಳುವುದು ಹೇಗೆ? ಇತ್ತೀಚಿನ ದಿನಗಳಲ್ಲಿ ಮಾಧ್ಯಮಗಳು ವರದಿ ಮಾಡಿರುವ ಪ್ರಕರಣಗಳನ್ನು ಪರಾಮರ್ಶೆಗೊಳಪಡಿಸಿದಾಗ, ನಮಗೆಕಂಡುಬರುವುದೇನೆಂದರೆ, ಮಗು ಪೋಷಕರಿಗೆ ಅಥವಾ ತನಗೆ ವಿಶ್ವಾಸವಿರುವ ಹಿರಿಯರಲ್ಲಿ ವರದಿ ಮಾಡಿದಾಗ ಅಥವಾ ಪೋಷಕರು ಮಗುವಿನ ಮೈಮೇಲಿನ ಗಾಯಗಳನ್ನು ಕಂಡಾಗ ಅಥವಾ ಮಗುವಿನ ವರ್ತನೆಯಲ್ಲಿ ಬದಲಾವಣೆಯನ್ನು ಗಮನಿಸಿದಾಗ ಮಾತ್ರ ಪ್ರಕರಣಗಳು ಬೆಳಕಿಗೆ ಬಂದಿವೆ.

ಉಪಸಂಹಾರದಲ್ಲಿ ಹೇಳಬಹುದಾದ ಅಂಶಗಳೆಂದರೆ; ಶಾಲೆಗಳಲ್ಲಿ ಮಕ್ಕಳ ರಕ್ಷಣೆಯ ಬಗ್ಗೆ ನಿಧಾನವಾಗಿಯಾದರೂ ಕಾನೂನು ಮತ್ತು ನೀತಿ ನಿರ್ದೇಶನದ ಚೌಕಟ್ಟುಗಳು ಹೊರಹೊಮ್ಮುತ್ತಿದ್ದರೂ, ಶಾಲೆಗಳು ಅವುಗಳನ್ನು ಜಾರಿಗೊಳಿಸದೆ ಇರುವಾಗ ಪರಿಣಾಮಗಳೇನು ಎಂಬ ಬಗ್ಗೆ ಹೆಚ್ಚಿನ ಸ್ಪಷ್ಟತೆ ಬೇಕಾಗಿದೆ ಮತ್ತು ಪೋಷಕರು ಹಾಗೂ ಎಸ್ ಎಮ್ ಸಿ ಗಳಲ್ಲಿ ಹೆಚ್ಚಿನ ಜಾಗೃತಿ ಅಗತ್ಯವಾಗಿದೆ. ವಿಧಿಸಲಾಗಿರುವ ನಿಬಂಧನೆಗಳನ್ನು ಪಾಲಿಸುವಂತೆ ಸರ್ಕಾರಗಳು ಶಾಲೆಗಳನ್ನು ನಿಯಂತ್ರಿಸುವುದನ್ನು ಖಾತ್ರಿಪಡಿಸಬೇಕಾಗಿದೆಯಾದರೂ, ತಳಮಟ್ಟದ ಕಣ್ಗಾವಲನ್ನು ಸಂಘಟಿಸಲು ಎಸ್ ಎಮ್ ಸಿ ಮತ್ತು ಪೋಷಕರು ಪೂರ್ವಭಾವಿಯಾಗಿ ಕ್ರಿಯಾಶೀಲರಾಗಿ ಶಾಲೆಗಳಲ್ಲಿ ಮಕ್ಕಳ ರಕ್ಷಣೆಯನ್ನು ಖಚಿತಪಡಿಸುವಂತೆ ಮಾಡುವುದು ಅವಶ್ಯಕವಾಗಿದೆ.

● ಅನುವಾದಕರು: **ಬಿ ಆರ್ ಮಂಜುನಾಥ್** | ಪರಿಶೀಲಕರು: **ನಾಗಮಣಿ ಎಸ್ ಎನ್**

---

**ಅರ್ಚನಾ** ಅವರು ಮಕ್ಕಳ ಹಕ್ಕುಗಳು ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಸ್ವತಂತ್ರ ಸಂಶೋಧಕರಾಗಿದ್ದಾರೆ. ಇವರು ಇದಕ್ಕೆ ಮೊದಲು ಟಾಟಾ ಇನ್ಸ್ಟಿಟ್ಯೂಟ್ ಆಫ್ ಸೋಷಿಯಲ್ ಸೈನ್ಸಸ್‌ನಲ್ಲಿ ಮತ್ತು ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾದಲ್ಲಿ ಕೆಲಸ ಮಾಡಿದ್ದಾರೆ. ಅವರನ್ನು ಸಂಪರ್ಕಿಸಬಹುದಾದ ತಾಣ mehendalearchana@gmail.com

**ಸ್ವಾಗತಾ** ಅವರು ಮಕ್ಕಳ ರಕ್ಷಣಾ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಸ್ವತಂತ್ರ ಕಾನೂನು ಸಂಶೋಧಕರಾಗಿದ್ದಾರೆ. ಅವರು ಪಶ್ಚಿಮ ಬಂಗಾಳದ ನ್ಯಾಷನಲ್ ಜ್ಯುರಿಡಿಕಲ್ ಸೈನ್ಸಸ್ ಯೂನಿವರ್ಸಿಟಿಯಲ್ಲಿ ಬಿ.ಎ.ಎಲ್.ಎಲ್.ಬಿ (ಆನರ್ಸ್)ಯನ್ನು ಮುಗಿಸಿದ್ದಾರೆ ಹಾಗೂ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ಅಂತರರಾಷ್ಟ್ರೀಯ ಮಾನವ ಹಕ್ಕುಗಳ ಕಾನೂನಿನಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದುಕೊಂಡಿದ್ದಾರೆ. ಅವರನ್ನು ಸಂಪರ್ಕಿಸಬಹುದಾದ ತಾಣ swagataraha@gmail.com